**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸ್ಪೆಷಲ್ ಕೇಸ್ ನಂ. 8/2014**

**ದೋ.ಸಾ. : 14 ಫ್ರಾ.ಸಾ. : 10**

ಸಾಕ್ಷಿಯ ಹೆಸರು : ಕೆ . ಎಸ್ . ಮಹಾದೇವಯ್ಯ
ತಂದೆಯ ಹೆಸರು : ಮರಿಸಿದ್ಧಯ್ಯ
ವಯಸ್ಸು : 70 ವರ್ಷ
ಉದ್ಯೋಗ : ನಿವೃತ್ತ ಹಿರಿಯ ಉಪ ನೋಂದಣಾಧಿಕಾರಿ
ವಾಸ : ಮೈಸೂರು

**ದಿನಾಂಕಃ 16-11-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ**

1. ನಾನು 2010 ರಲ್ಲಿ ರಾಮನಗರದಲ್ಲಿ ಹಿರಿಯ ಉಪ ನೋಂದಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಈ ಪ್ರಕರಣದಲ್ಲಿ ಮೈಸೂರಿನ ಲೋಕಾಯುಕ್ತ ಪೊಲೀಸ್ ನವರು ದಿನಾಂಕ 19.05.2010 ರಂದು ಪತ್ರ ಬರೆದು ದಸ್ತಾವೇಜಿನ ದೃಢೀಕೃತ ನಕಲು ಹಾಗೂ ಋಣಭಾರ ಪ್ರಮಾಣ ಪತ್ರವನ್ನು ನರೇಂದ್ರ ಗೋವಿಂದರಾಯ ಹಿತ್ತಲಮಕ್ಕಿ , ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ , ಅಂಕೋಲಾರವರ ವಿರುದ್ಧ ಪ್ರಕರಣದ ಬಗ್ಗೆ ನಮ್ಮ ಕಚೇರಿಯಿಂದ ನೀಡಿದ್ದ ಹಿಂಬರಹ / ದಸ್ತಾವೇಜು ಸಂ. 92/2000-2001 ದಿನಾಂಕ 12.04. ರ ನಿವೇಶನದ ಮಾರುಕಟ್ಟೆ ಬೆಲೆ ರೂ. 98,400/- ಆಗಿದ್ದು ಮುದ್ರಾಂಕ ಶುಲ್ಕ ರೂ. 13,298/- ಕಟ್ಟುವಂತೆ ಸೂಚನೆ ಇದ್ದು ಅದು ಯಾರಿಗೆ ಸಂಬಂಧಪಟ್ಟಿದೆ ಎಂಬ ವಿವರ , ಅದರ ಸಂಬಂಧವಾಗಿ ನೋಂದಣಿಯಾಗಿರುವ ಕ್ರಯಪತ್ರದ ದೃಢೀಕೃತ ನಕಲು ಮತ್ತು ಋಣಭಾರ ಪ್ರಮಾಣ ಪತ್ರ ನೀಡುವಂತೆ ಕೇಳಿದ್ದರು. ಈಗ ಆ ಪತ್ರವನ್ನು ನೋಡಿರುತ್ತೇನೆ. ಅದು ನೆರಳಚ್ಚು ಪ್ರತಿಯಾಗಿರುವುದರಿಂದ ನಿಶಾನೆ ಮಾಡಿರುವುದಿಲ್ಲ. ನಾನು ಕಚೇರಿಯಲ್ಲಿ ಸದರಿ ದಸ್ತಾವೇಜಿನ ಬಗ್ಗೆ ಪರಿಶೀಲನೆ ಮಾಡಿರುತ್ತೇನೆ. ದಿನಾಂಕ 18.02.2000 ರಲ್ಲಿ ಪುಸ್ತಕ ಒಂದು ಸಂಪುಟ 1914 ರಲ್ಲಿ ಪುಟ ಸಂ. 193-200/2000-2001 ನೇ ಇಸವಿಯ ದಸ್ತಾವೇಜು ಸಂಖ್ಯೆ 92 ಆಗಿ ದಿನಾಂಕ 18.05.2000 ರಲ್ಲಿ ನೋಂದಣಿಯಾದ ಪತ್ರದ ದೃಢೀಕೃತ ನಕಲನ್ನು ನಾನು ಕಳುಹಿಸಿರುತ್ತೇನೆ. ಅದರೊಂದಿಗೆ

ಋಣಭಾರ ಪ್ರಮಾಣ ಪತ್ರವನ್ನು ನಮೂನೆ-15 ರಲ್ಲಿ ಕಳುಹಿಸಿರುತ್ತೇನೆ. ಸದರಿ ದಸ್ತಾವೇಜನ್ನು ಸಿ.ಪಿ. ಯೋಗೇಶ್ವರ , ವ್ಯವಸ್ಥಾಪಕ ನಿರ್ದೇಶಕರು , ಮೆಗಾ ಸಿಟಿ ಡೆವಲಪರ್ಸ್ ಆ್ಯಂಡ್ ಬಿಲ್ಡರ್ಸ್ ರವರು ನರೇಂದ್ರ ಹಿತ್ತಲಮಕ್ಕಿರವರಿಗೆ ಬರೆದುಕೊಟ್ಟಿದ್ದರು. ಅದರಲ್ಲಿ ಕ್ರಯದ ಮೊಬಲಗು ರೂ. 98,400/- ನಮೂದು ಇರುತ್ತದೆ. ನಾನು ನನ್ನ ಪತ್ರದೊಂದಿಗೆ ಅದನ್ನು ಕಳುಹಿಸಿರುತ್ತೇನೆ. ಈಗ ನಾನು ಬರೆದ ಕವಚ ಪತ್ರ ನೋಡಿರುತ್ತೇನೆ. ಅದರಲ್ಲಿ ನನ್ನ ರುಜು ಇದೆ . ಆ ಪತ್ರವನ್ನು ನಿ.ಪಿ. 147 ಎಂದು ಗುರುತಿಸಲಾಯಿತು. ಸಾಕ್ಷಿಯ ರುಜುವನ್ನು ನಿ.ಪಿ. 14(ಎ) ಎಂದು ಗುರುತಿಸಲಾಯಿತು. ಈಗ ಅದರೊಂದಿಗೆ ಕಳುಹಿಸಿದ ಋಣಭಾರ ಪ್ರಮಾಣ ಪತ್ರ ನಮೂನೆ-15 ಅನ್ನು ನೋಡಿರುತ್ತೇನೆ. ಅದರಲ್ಲಿ ನನ್ನ ರುಜು ಇದೆ . ಸದರಿ ದಾಖಲಾತಿಯನ್ನು ನಿ.ಪಿ. 148 ಎಂದು ಗುರುತಿಸಲಾಯಿತು. ಸಾಕ್ಷಿಯ ರುಜುವನ್ನು ನಿ.ಪಿ. 148(ಎ) ಎಂದು ಗುರುತಿಸಲಾಯಿತು. ಈಗ ಮೇಲೆ ಹೇಳಿದ ದಸ್ತಾವೇಜಿನ ದೃಢೀಕೃತ ನಕಲನ್ನು ನೋಡಿರುತ್ತೇನೆ. ಅದರಲ್ಲಿ ನನ್ನ ರುಜು ಇದೆ . ಆ ದಾಖಲಾತಿಯನ್ನು ನಿ.ಪಿ. 149 ಎಂದು ಗುರುತಿಸಲಾಯಿತು. ಸಾಕ್ಷಿಯ ರುಜುವನ್ನು ನಿ.ಪಿ. 149(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ವಿ ಎನ್ ಎನ್ ರವರಿಂದ**

2. ಲೋಕಾಯುಕ್ತ ಪೊಲೀಸ್ ನವರ ಮಾತು ಕೇಳಿ ನಾನು ಸುಳ್ಳು ದಾಖಲಾತಿ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ – ಇಲ್ಲ –**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ